## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ

**ಸೂಚನೆ:-**

ಮಂಗಳೂರಿನಲ್ಲಿರುವ ಅತಿ ಹಿಂದುಳಿದ ಜಾತಿಯಾದ ಜೋಗಿ ಸಮಾಜಕ್ಕೆ ಮಂಗಳೂರು ತಾಲ್ಲೂಕಿನ ಕೊಡಿಯಾಲ್ ಬೈಲ್ ಟಿ.ಎಸ್.ನಂ.1557/3ರಲ್ಲಿ 0-17 ಸೆನ್ಸ್ ಜಮೀನನ್ನು ದ.ಕ ಜಿಲ್ಲೆಯಲ್ಲಿ ಜೋಗಿ ಸಮಾಜದವರಿಗೆ ಕಡತ ಸಂಖ್ಯೆ ಟಿ.ಆರ್.67/ಎ.ಜಿ.ಎ2016/ಕಂಪ್ಯೂಟರ್ ನಂ.229323 ರಂತೆ 2019ರ ಸಚಿವ ಸಂಪುಟದಲ್ಲಿ ಜೋಗಿ ಸಮಾಜಕ್ಕೆ ಸಭಾಭವನ ನಿರ್ಮಿಸಲು ಭೂಮಿಯನ್ನು ಮಂಜೂರು ಮಾಡಲಾಗಿರುತ್ತದೆ.

ಆದರೆ ಈವರೆಗೂ ಸದ್ರಿ ಭೂಮಿಯನ್ನು ಜೋಗಿ ಸಮಾಜದ ಸಭಾಭವನ ರಚನೆಗೆ ಬೇಕಾದ ದಾಖಲೆ ಪತ್ರಗಳನ್ನು ನೀಡದೇ ಈ ಸಮಾಜವು ಸರ್ಕಾರದ ಮೇಲೆ ವಿಶ್ವಾಸವನ್ನು ಕಳೆದುಕೊಳ್ಳುಂದತಾಗಿದೆ ಎಂಬುದರ ಬಗ್ಗೆ.

**ಉತ್ತರ:-**

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಕೊಡಿಯಾಲ್ ಬೈಲ್ ಎ ಗ್ರಾಮದ ಟಿ.ಎಸ್ ನಂಬರ್ 1557/3ಪಿ2 ರಲ್ಲಿ 0.17 ಎಕರೆ ಜಮೀನು ಪೊರಂಬೋಕು ಜಮೀನಾಗಿರುತ್ತದೆ. ನಿಯಮಾನುಸಾರ ಪೊರಂಬೋಕು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮಾತ್ರ ವಿರಹಿತಪಡಿಸಲು ಅವಕಾಶವಿರುತ್ತದೆ. ಸದರಿ ಜಮೀನು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ನಗರ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಮೀನಗಳನ್ನು ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ, ಸದರಿ ಜಮೀನನ್ನು ದಕ್ಷಿಣ ಕನ್ನಡ ಜೋಗಿ ಸಮಾಜ ಸುಧಾರಕ ಸಂಘ ಇವರಿಗೆ ಮಂಜೂರು ಮಾಡುವ ಕುರಿತು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಛೇರಿಯ ಪತ್ರ ಸಂಖ್ಯೆ:ಎಲ್.ಎನ್.ಡಿ(1)ಪಿಡಿಆರ್.ಸಿಆರ್.148/2014-15/137743 ದಿನಾಂಕ:07/06/2016 ರಂತೆ ಪ್ರಸ್ತಾವನೆಯನ್ನು ಪ್ರಾದೇಶಿಕ ಆಯುಕ್ತರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಈ ಮಧ್ಯೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಕೊಡಿಯಾಲ್ ಬೈಲ್ 'ಎ' ಗ್ರಾಮದ ಟಿ.ಎಸ್.ನಂಬರ್ 1557/3ಪಿ2 ರಲ್ಲಿ ಉಳಿಕೆ 0.23 ಎಕರೆ ಜಮೀನನ್ನು ಮಂಜೂರು ಮಾಡುವಂತೆ ದಿನಾಂಕ:20/12/2017ರ ಪತ್ರದಲ್ಲಿ ಸರ್ಕಾರವನ್ನು ಕೋರಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಕೋರಲಾಗಿದ್ದ ಜಮೀನು ಹಾಗೂ ಜೋಗಿ ಸಮಾಜ ಸುಧಾರಕ ಸಂಘಕ್ಕೆ ಮಂಜೂರು ಮಾಡಲು ಕೋರಿರುವ ಜಮೀನುಗಳು ಒಂದೇ ಆಗಿದ್ದು, ಪಹಣಿ

ಪತ್ರಿಕೆಯಂತೆ ಲಭ್ಯವಿರುವ ಸ.ನಂ 1557/3ಪಿ2 ರ 0.17 ಎಕರೆ ಸರ್ಕಾರಿ ಜಮೀನನ್ನು ಬಸ್ ನಿಲ್ದಾಣದ ಉದ್ದೇಶಕ್ಕಾಗಿ ಹಸ್ತಾಂತರಿಸುವುದು ಸೂಕ್ತ ಎಂಬ ವರದಿಯನ್ನು ಜಿಲ್ಲಾಧಿಕಾರಿಯವರು ಸಲ್ಲಿಸಿದ್ದರು.

ಅದರಂತೆ, ಸಚಿವ ಸಂಪುಟದ ನಿರ್ಣಯದನ್ವಯ ಸರ್ಕಾರದ ಆದೇಶ ಸಂಖ್ಯೆ ಆರ್ ಡಿ 67 ಎಲ್‌ಜಿಎ 2016, ದಿನಾಂಕ 30/05/2019 ರಂತೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಕೊಡಿಯಾಲ್ ಬೈಲ್ ಎ ಗ್ರಾಮದ ಸ.ನಂ 1557/3ಪಿ2 ರಲ್ಲಿನ 23 ಸೆಂಟ್ ಜಮೀನನ್ನು ಹಾಲಿ ಇರುವ ಬಸ್ ನಿಲ್ದಾಣದ ವಿಸ್ತರಣೆಗಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 20(1) (ಸಿ) ರಂತೆ ಮಾರುಕಟ್ಟೆ ದರದ ಶೇಕಡ 50 ರಷ್ಟು ದರ ಮತ್ತು ಇತರೆ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಮಂಜೂರು ಮಾಡಲಾಗಿರುತ್ತದೆ.

**(ಕಡತ ಸಂಖ್ಯೆ: ಕಂಇ 58 ಎಲ್‌ಜಿಎ 2024)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು